**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿ.ಸಿ. ನಂಬರಃ 12/2013**

**ಸಾಕ್ಷಿಃ ಪಿ. ಡಬ್ಲ್ಯೂಃ 3**

| | | |
|---|---|---|
| ಸಾಕ್ಷಿದಾರನ ಹೆಸರು | : | ಸುಬ್ರಹ್ಮಣ್ಯ ಎಸ್. ನಾಯ್ಕ |
| ತಂದೆಯ ಹೆಸರು | : | ಸೀತಾರಾಮ ನಾಯ್ಕ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆ |
| ವಾಸ್ತವ್ಯ | : | ಶಿರಾಲಿ, ಭಟ್ಕಳ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 23-02-2026**

**ಕಲಂ. 299 ಸಿ.ಆರ್.ಪಿ.ಸಿ. ರಡಿಯಲ್ಲಿ ಸಾಕ್ಷಿದಾರರ ಹೇಳಿಕೆಃ –**

ನಾನು ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ 2019 ರಿಂದ ಇವತ್ತಿನವರೆಗೆ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಆರೋಪಿಯ ಚರ ಮತ್ತು ಸ್ಥಿರಾಸ್ತಿಯ ಜಪ್ತಿಗಾಗಿ ಉದ್ಘೋಷಣೆಯನ್ನು ಹೊರಡಿಸಿದ್ದು, ಸದ್ರಿ ವಾರಂಟನ್ನು ನಾನು ಪಡೆದುಕೊಂಡು ಆರೋಪಿಯ ವಿಳಾಸಕ್ಕೆ ಹೋಗಿ ಮಹಾರಾಷ್ಟ್ರದ ಕಲ್ಯಾಣ ದೊಂಬಿವಲ್ಲಿ ಮಹಾನಗರಪಾಲಿಕೆಯ ಕಛೇರಿಗೆ ಹೋಗಿ ಆರೋಪಿಯ ಹೆಸರಿನಲ್ಲಿರುವ ಚರ ಮತ್ತು ಸ್ಥಿರಾಸ್ತಿಯ ಬಗ್ಗೆ ಮಾಹಿತಿ ನೀಡುವಂತೆ ಅರ್ಜಿ ನೀಡಿರುತ್ತಾರೆ. ತದನಂತರ, ಸದ್ರಿ ಮಾಹಿತಿಯನ್ನು ಮಹಾರಾಷ್ಟ್ರದ ಕಲ್ಯಾಣ ದೊಂಬಿವಲ್ಲಿ ಮಹಾನಗರಪಾಲಿಕೆಯವರು ನಮ್ಮ ಠಾಣೆಗೆ ಕಳುಹಿಸಿರುತ್ತಾರೆ. ಅದನ್ನು ಫ್ರಾಸಾ-2 ರವರು ಪಡೆದು, ನ್ಯಾಯಾಲಯಕ್ಕೆ ಆ ಬಗ್ಗೆ ವರದಿಯನ್ನು ನೀಡಿರುತ್ತಾರೆ. ಸಾಕ್ಷಿಯು ತಾನು ಪಡೆದ ವಾರಂಟನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಮಹಾರಾಷ್ಟ್ರದ ಕಲ್ಯಾಣ ದೊಂಬಿವಲ್ಲಿ ಮಹಾನಗರಪಾಲಿಕೆಯವರಿಗೆ ಆರೋಪಿಯ ಚರ ಮತ್ತು ಸ್ಥಿರಾಸ್ತಿಯ ಬಗ್ಗೆ ಮಾಹಿತಿಯನ್ನು ಕೋರಿ ನೀಡಿದ ಅರ್ಜಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾದಂ., ಭಟ್ಕಳ.**